ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ



## ಯಶಸ್ಸಿನ ಓಟ, ಛಲದ ಆಟ

ಅಧ್ಯಾಯ 13

ಪ್ರದರ್ಶನದ ದಿನ ಬಂದೇ ಬಿಟ್ಟಿತು. ದಿನಾಂಕ 18 ಜುಲೈ 2007ರ ಹೊತ್ತಿಗೆ ತಯಾರಾಗಿ ಮಹಾಬಲೇಶ್ವರದಲ್ಲಿಯೇ ಉಳಿದ ಮೋಂಬತ್ತಿಗಳಿಂದ ಪೂರಾ ಕೋಣೆ ತುಂಬಿ ಬಿಟ್ಟಿತ್ತು. ಆ ಎಲ್ಲ ಮೋಂಬತ್ತಿಗಳನ್ನು ಟಾಟಾ 407 ಟೆಂಪೋನಲ್ಲಿ ತುಂಬಿಕೊಂಡು ಅದೇ ದಿನ ಸಂಜೆ ಪುಣೆಗೆ ತಲುಪಿದರು. ಪ್ರದರ್ಶನದ ಹಿಂದಿನ ದಿನ, ಜುಲೈ 19ರಂದು ಎರಡು ಟೆಂಪೋಗಳನ್ನು ಬಾಡಿಗೆಗೆ ತೆಗೆದುಕೊಂಡರು. ಅವುಗಳಲ್ಲಿ ಗೋದಾಮಿನಲ್ಲಿ ಇಟ್ಟಿದ್ದ ಎಲ್ಲ ಮೋಂಬತ್ತಿಗಳನ್ನು ತಿಲಕ್ ಸ್ಮಾರಕ ಸಭಾಂಗಣಕ್ಕೆ ತಂದರು. ಸಚಿನ್ ಅವರಿಗೆ ಪುಣೆಯಲ್ಲಿ ಉದ್ಯಮರಂಗದ ಅನೇಕ ಮಿತ್ರರಿದ್ದರು. ಅವರಲ್ಲಿ ಆಪ್ಟೆ ಕಾನಡೆ ಜ್ಯುವೆಲರ್ಸ್, ಕಾಕಾ ಹಲ್ವಾಯಿ, ಶೈಲೇಶ್ ನಗರ್ಕರ್, ರಾಜೂ ಮೋರೆ ಮುಂತಾದ ಸ್ನೇಹಿತರೂ ಇದ್ದರು. ಆ ಎಲ್ಲ ಶ್ರೀಮಂತರು ತಮ್ಮ ಮನೆಯಲ್ಲಿ ನೀರಿನ ಲೋಟ ಕೂಡಾ ಎತ್ತಿರಲಿಕ್ಕಿಲ್ಲ. ಅವರೆಲ್ಲರೂ ಭಾವೇಶ್ ಅವರಿಗೆ ಸಹಾಯ ಮಾಡಲು ಆ ಗೋದಾಮಿನ ಪೆಟ್ಟಿಗೆಗಳನ್ನು ಹೊತ್ತರು. ಒಂದು ದೊಡ್ಡ ತಂಡ ತಿಲಕ್ ಸ್ಮಾರಕದಲ್ಲಿ ಅದಾಗಲೇ ಉಪಸ್ಥಿತವಿತ್ತು.

ಆ ಎಲ್ಲ ಪೆಟ್ಟಿಗೆಗಳನ್ನು ಎತ್ತಿ ಸಭಾಂಗಣದ ನಡುವೆ ತಂದು ಇಟ್ಟರು. ಬೆಳಗಿನಿಂದಲೇ ಅಲ್ಲಿ ಫಿಲ್ಮ್ ಸಿಟಿಯ ತಂಡ ಕೆಲಸ ಆರಂಭಿಸಿತ್ತು. ತಿಲಕ್ ಸ್ಮಾರಕದ ಮ್ಯಾನೇಜರ್ ಕೂಡಾ ಅಲ್ಲಿ ಉಪಸ್ಥಿತರಿದ್ದರು. ಅವರು ತಮ್ಮ ಕರ್ಮಚಾರಿಗಳನ್ನು ಕರೆದು ಪೂರಾ ಹಾಲ್‌ನಲ್ಲಿ ದಪ್ಪ ಕಂಬಳಿಯನ್ನು ಹರಡಿಸಿದರು. ಮಧ್ಯಾಹ್ನದ ಹೊತ್ತಿಗೆ ಎಲ್ಲ ಪೆಟ್ಟಿಗೆಗಳೂ ಗೋದಾಮಿನಿಂದ ತಿಲಕ್ ಸ್ಮಾರಕಕ್ಕೆ ತಲುಪಿದ್ದವು. ಎಲ್ಲರೂ ಬೆವರಿನಲ್ಲಿ ತೋಯ್ದು ತೊಪ್ಪೆಯಾಗಿದ್ದರು. ಆದರೆ ಎಲ್ಲರಲ್ಲಿಯೂ ಏನಾದರೂ ಹೊಸದು ಮಾಡುವ ಉತ್ಸಾಹ. ಅದೆಷ್ಟು ಸಂಖ್ಯೆಯಲ್ಲಿ ಸ್ವಯಂಸೇವಕರು ಅಲ್ಲಿ ತೊಡಗಿದ್ದರು ಎಂದರೆ ಎಣಿಸುವುದು ಕಷ್ಟವಿತ್ತು. ಅವರೆಲ್ಲರೂ ಪೆಟ್ಟಿಗೆ ತೆರೆದು ಸಚಿನ್, ಸಾಹಿಲೀ ಮತ್ತು ರೋಹಿಣಿ ಅವರ ನಿರ್ದೇಶನದಂತೆ ಎಲ್ಲ ಮೋಂಬತ್ತಿಗಳನ್ನು ಅವುಗಳಿಗೆ ನಿರ್ಧರಿಸಿದ ತಾಣದಲ್ಲಿ ಅಲಂಕರಿಸಿ ಜೋಡಿಸಲು ತೊಡಗಿದರು. ಫಿಲ್ಮ್ ಸಿಟಿಯ ವಿದ್ಯಾರ್ಥಿಗಳು ಮತ್ತು ಈ ಸ್ವಯಂಸೇವಕರ ನಡುವೆ ಒಳ್ಳೆಯ ತಾಳಮೇಳವಿತ್ತು. ಹಮ್ಮುಬಿಮ್ಮುಗಳಿಲ್ಲದೆ ಒಂದು ತಂಡವಾಗಿ ಅವರು ಆ ದಿನ ದುಡಿದರು. ಇವರಲ್ಲಿಯೇ ಓರ್ವ ಗೆಳೆಯ ಕೌಶಿಕ್ ಇದ್ದರು, ಆತನದು ಕ್ಯಾಟರಿಂಗ್ ಕೆಲಸ. ಆತ ದಿನಾಂಕ 19ರಿಂದ 23ರವರೆಗೆ, ಅಲ್ಲಿಯ ಯಾರೇ ಸ್ವಯಂಸೇವಕರು ತಿಂಡಿ ತಿನ್ನಲು, ಊಟ ಮಾಡಲು, ಚಹಾ ಕುಡಿಯಲು ತಮ್ಮ ಮನೆಗೆ ಹೋಗಬಾರದು ಎಂದು ನಿಯಮ ವಿಧಿಸಿದರು. ಬೆಳಗಿನ ನಾಷ್ಟಾದಿಂದ ಹಿಡಿದು ರಾತ್ರಿಯ ಊಟದವರೆಗಿನ ಎಲ್ಲ ವ್ಯವಸ್ಥೆಯನ್ನು ತಾನು ಮಾಡುವುದಾಗಿ ಹೇಳಿದರು. ಮಲಗುವುದಕ್ಕೆ ಮಾತ್ರ ನಿಮ್ಮ ನಿಮ್ಮ ಮನೆಗಳಿಗೆ ಹೋಗಿ ಎಂದರು.

ಸಚಿನ್ ಅವರ ಇಡೀ ಮನೆ ಅತಿಥಿಗಳಿಂದ ತುಂಬಿಹೋಗಿದ್ದ ಕಾರಣ, ಅವರು ಹತ್ತಿರದ ಹೋಟೆಲಿನಲ್ಲಿ 15 ಕೋಣೆಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದರು. ಬಹಳಷ್ಟು ಸ್ವಯಂಸೇವಕರು ಅಲ್ಲಿಯೇ ಇಳಿದುಕೊಂಡು, ಸಹಾಯಕ್ಕೆ ನಿಂತಿದ್ದರು. ಆನಂದ್ ವನ್ ಹೋಟೆಲಿನ ನಿಯಮಿತ ಗ್ರಾಹಕರು ಮತ್ತು ಸರಬರಾಜುದಾರರು ಕೂಡಾ ಈ ಪ್ರದರ್ಶನಕ್ಕೆ ಕೈ ಜೋಡಿಸಿದ್ದರು. ಹಾಗೆಂದೇ ಆ ಸಭಾಂಗಣದಲ್ಲಿ ಬಲು ದೊಡ್ಡ ತಂಡ ಸಿದ್ಧವಾಗಿತ್ತು. ಇಡೀ ಹಾಲ್‌ನಲ್ಲಿ ಮೋಂಬತ್ತಿಗಳ ಅಗಣಿತ ಕೌಂಟರ್‌ಗಳಿದ್ದವು. ಅವುಗಳನ್ನು ಸಂಭಾಳಿಸಲು 6070 ಜನರಾದರೂ ಬೇಕಿತ್ತು. ಜುಲೈ 19ನೇ ತಾರೀಕಿನ ಮಧ್ಯರಾತ್ರಿಯ ಹೊತ್ತಿಗೆ ಇಡೀ ಸಭಾಂಗಣವನ್ನು ಅಲಂಕರಿಸಿ, ಜೋಡಿಸಿ ಇಡಲಾಯಿತು.

ಮಂಗೇಶ್ ತೆಂಡೂಲ್ಕರ್ ಅವರು ಈ ಪ್ರದರ್ಶನವನ್ನೇ ಒಂದು ವಸ್ತುವಾಗಿ ಇಟ್ಟುಕೊಂಡು ಕೆಲವು ವ್ಯಂಗ್ಯಚಿತ್ರಗಳನ್ನು ಬಿಡಿಸಿದರು. ಅವುಗಳನ್ನು ಗೋಡೆಗಳ ಮೇಲೆ ಅಂಟಿಸಲಾಯಿತು. ಸಚಿನ್ ಒಂದು ದೊಡ್ಡ ಸ್ಕ್ರೀನ್ ತರಿಸಿ ಹಾಲ್‌ನಲ್ಲಿ